ಮನವಿಗಳಂ

ಅಧ್ಯಕ್ಷರಂ.—ಬಾಯಿ ಮಾತಿನ ಮೂಲಕ ಉತ್ತರಿಸುವ ಪಶ್ನೆಗಳು.

ಶ್ರೀ ಭೀಮಣ್ಣ ಖಂಡ್ರೆ — ಅಧ್ಯಕ್ಷರೆ, ಈಗ ತಾವು ಪ್ರಶ್ನೆಗಳ ಪಟ್ಟಿಯನ್ನು ಏನು ಕಳುಹಿಸುತ್ತಿದ್ದೀರಿ ಅದರಲ್ಲಿ ಉತ್ತರ ಇಲ್ಲ. ಪ್ರಶ್ನೋತ್ತರಗಳ ವಾಸ್ತವತೆ ಎಲ್ಲರೂ ತಿಳಿದುಕೊಳ್ಳಬೇಕಾಗಿದೆ. ಪ್ರತಿಯೊಬ್ಬ ಸದಸ್ಯರು ನೋಟೀಸ್ ಆಫೀಸ್‌ಗೆ ಹೋಗಿ ಉತ್ತರ ತಿಳಿದುಕೊಳ್ಳಬೇಕೆಂದರೆ ಕಷ್ಟವಾಗುತ್ತದೆ. ತಾವು ಮೊದಲೇ ಉತ್ತರವನ್ನು ನಮಗೆ ಒದಗಿಸಿದ್ದರೆ ಅದರ ಬಗ್ಗೆ ನಾವು ಯಾವರೀತಿ ಪ್ರಶ್ನೆ ಕೇಳಬೇಕು ಅದಕ್ಕೆ ತಯಾರಾಗಿ ಬರಬಹುದಾಗಿತ್ತು.

ಅಧ್ಯಕ್ಷರು.—ಇದು ನಾನು ಮಾಡಿದ್ದು ಅಲ್ಲ. ಈ ಮಾನ್ಯ ಸಭೆ ಒಂದು ಸಮಿತಿ ರಚನೆ ಮಾಡಿ, ಆ ಸಮಿತಿ ಮಾಡಿದಂಥ ಶಿಫಾರಸ್ಸಿನ ಮೇಲೆ ಈ ಹೊಸ ನಿಯಮಾವಳಿಯು ಜಾರಿಗೆ ಬಂದಿದೆ. ಅದರಂತೆ ಹಾಕಿದ್ದೇನೆ.

ಶ್ರೀ ಭೀಮಣ್ಣ ಖಂಡ್ರೆ.—ಅಧ್ಯಕ್ಷರೆ, ಈ ರೀತಿ ಮಾಡಿರುವುದರಿಂದ ಬಹಳ ಅನಾನುಕೂಲ ವಾಗುತ್ತದೆ. ಅದನ್ನು ಸರಿಪಡಿಸಿ ಅನುಕೂಲ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಗೋವಿಂದ ಪಿ. ಒಡೆಯರಾಜ್. —ಅಧ್ಯಕ್ಷರೆ, ಈ ರೀತಿ ಮಾಡುವುದರಿಂದ ಸದಸ್ಯರಿಗೆ ಅಲ್ಲ, ಸರ್ಕಾರಕ್ಕೂ ತೊಂದರೆಯಾಗುತ್ತದೆ ಅಲ್ಲದೇ ಕರ್ನಾಟಕ ವಿಧಾನ ಮಂಡಲದ ಕಾರ್ಯಾಲಯಕ್ಕೂ ತೊಂದರೆಯಾಗುತ್ತದೆ. ಈಗ ತಾವು ಲೋಕಸಭೆಯ ಪದ್ಧತಿಯನ್ನು ಅನುಸರಿಸುತ್ತಿದ್ದೀರಿ. ಆ ಪದ್ಧತಿ ನಮಗೆ ಅನುಕೂಲವಾಗುತ್ತದೆಯೋ ಇಲ್ಲವೋ ಗೊತ್ತಿಲ್ಲ. ಈಗ ನಾನು ಕೇಳಿರತಕ್ಕ ಪ್ರಶ್ನೆಯನ್ನು ಕಳುಹಿಸಿಕೊಟ್ಟಿಲ್ಲ. ಉತ್ತರ ತಿಳಿದುಕೊಳ್ಳುವುದಕ್ಕೆ ನೋಟೀಸ್ ಆಫೀಸ್‌ಗೆ ಹೋಗಿ ನೋಡಬೇಕೆಂದರೆ ತುಂಬಾ ತೊಂದರೆಯಾಗುತ್ತದೆ. ಈ ಪದ್ಧತಿ ಇವೊತ್ತಿನಿಂದ ಜಾರಿಗೆ ಬಂದಿರುವುದರಿಂದ ಇದರಲ್ಲಿ ಪರಿಷ್ಕರಣ ಮಾಡತಕ್ಕದ್ದು ಬಹಳ ಇದೆ. ಆದ್ದರಿಂದ, ನಾನು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ ಈ ಬಗ್ಗೆ ತಾವು ಹೆಚ್ಚು ಲಕ್ಷ್ಯ ಕೊಟ್ಟು ಅನಾನುಕೂಲವಾಗತಕ್ಕ ತೊಂದರೆಯನ್ನು ತಪ್ಪಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್ —ಅಧ್ಯಕ್ಷರೆ, ನಾನು ಈ ಸಂದರ್ಭದಲ್ಲಿ ತಮ್ಮಲ್ಲಿ ಒಂದು ವಿನಂತಿ ಮಾಡಿಕೊಳ್ಳಬೇಕಾಗಿದೆ. ಇವೊತ್ತು ಯಾವ ಮಂತ್ರಿಗಳು ಪ್ರಶ್ನೆಗಳಿಗೆ ಉತ್ತರಿಸುತ್ತಾರೆ ಅವರಿಗೆ ಮಾತ್ರ ಉತ್ತರ ಗೊತ್ತಾಗುತ್ತದೆ. ಬೇರೆ ಸದಸ್ಯರು ಉತ್ತರ ತಿಳಿದುಕೊಳ್ಳಬೇಕಾಗುತ್ತದೆ. ಬೇರೆ ಸದಸ್ಯರು ಉತ್ತರ ತಿಳಿದುಕೊಳ್ಳಬೇಕೆಂದರೆ ನೋಟೀಸ್ ಆಫೀಸ್‌ನಲ್ಲಿ ಹೋಗಿ ನೋಡಬೇಕಾಗಿದೆ. ಪ್ರಶ್ನೆ ಯಾವ ಸದಸ್ಯರಿಗೆ ಸಂಬಂಧಪಟ್ಟಿರುತ್ತದೆ ಆ ಸದಸ್ಯರಿಗಾದರೂ ಉತ್ತರವನ್ನು ಒದಗಿಸಿದರೆ ಅವರು ಮರು ಪ್ರಶ್ನೆ ಕೇಳಲಿಕ್ಕೆ ಅನುಕೂಲವಾಗುತ್ತದೆ ಇನ್ನು ರೂಲ್ಸ್ ಆಫ್ ಪ್ರೊಸೀಜರ್ ಬದಲಾವಣೆ ಮಾಡುವ ಬಗ್ಗೆ ಯೋಚನೆ ಮಾಡಬೇಕಾಗುತ್ತದೆ. ಇವತ್ತು ಮೊದಲಿನ ದಿವಸ, ಸ್ವಲ್ಪ ತಕರಾರು ಬಂದಿರಬಹುದಂ. ಅದನ್ನು ಪರಿಹರಿಸುವ ಬಗ್ಗೆ ಯೋಚನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಅರ್ಧ ಗಂಟೆಗೆ ಮುಂಚೆಯೇ ನೋಟೀಸ್ ಆಫೀಸ್‌ನಲ್ಲಿ ಉತ್ತರ ಇಟ್ಟಿರುತ್ತಾರೆ. ಅದನ್ನು ಪ್ರತಿಯೊಬ್ಬ ಸದಸ್ಯರು ನೋಡಿಕೊಂಡು ಬರಬಹುದು.

ಶ್ರೀ ಪಂಪಾಪತಿ.—ಅಧ್ಯಕ್ಷರೆ, ಯಾವ ಸದಸ್ಯರು ಪ್ರಶ್ನೆ ಹಾಕಿರುತ್ತಾರೆ, ಆ ಸದಸ್ಯರಿಗಾದರೂ ಉತ್ತರ ಒದಗಿಸುವ ವ್ಯವಸ್ಥೆ ಮಾಡಬೇಕು. ಅದರಿಂದ ತೊಂದರೆ ಏನೂ ಆಗುವುದಿಲ್ಲ. ಸುಮಾರು ೧೨–೧೫ ಜನ ಸದಸ್ಯರು ಪ್ರಶ್ನೆ ಹಾಕಿದವರು ಇರುತ್ತಾರೆ. ತಾವು ಉತ್ತರಗಳನ್ನು ಹೇಗಿದ್ದರೂ ಮುದ್ರಿಸಿರುತ್ತೀರಿ, ಅವುಗಳನ್ನು ಪ್ರಶ್ನೆ ಹಾಕಿರತಕ್ಕ ಸದಸ್ಯರಿಗೆ ಕಳುಹಿಸಿಕೊಡುವುದರಿಂದ ತೊಂದರೆ ಏನು ಆಗುವುದಿಲ್ಲ. ಆದ್ದರಿಂದ ಈ ಬಗ್ಗೆ ಸೂಕ್ತ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.— ನೋಟೀಸ್ ಆಫೀಸ್‌ನಲ್ಲಿ ಮಾನ್ಯ ಸದಸ್ಯರುಗಳು ಕೇಳಿರುವ ಪ್ರಶ್ನೆಗಳಿಗೆ ಉತ್ತರಗಳನ್ನು ಸಿದ್ಧ ಮಾಡಿ ಇಟ್ಟಿರುತ್ತೇವೆ. ಸದಸ್ಯರು ಅರ್ಧ ಗಂಟೆ ಮುಂಚಿತವಾಗಿ ಅಲ್ಲಿ ಹೋಗಿ ನೋಡಿಕೊಳ್ಳಬೇಕು.

ಶ್ರೀ ಗೋವಿಂದ ಪಿ. ಒಡೆಯರಾಜ್.— ತಾವು ಮಾನ್ಯ ಕಾರ್ಯದರ್ಶಿಯವರನ್ನು ಕೇಳಿ. ಸರ್ಕಾರದವರ ಉತ್ತರ ನಮಗೆ ಗೊತ್ತಾಗದಿದ್ದರೆ ನಾವು ಏನು ಪ್ರಶ್ನೆಗಳನ್ನು ಕೇಳುವುದಕ್ಕಾಗುತ್ತದೆ ಮತ್ತು ಸರ್ಕಾರದಿಂದ ನಮಗೆ ಉತ್ತರ ಬರದಿದ್ದರೆ ಏನು ಮಾಡುವುದು ?

ಶ್ರೀ ಭೀಮಣ್ಣ ಖಂಡ್ರೆ.—ಪ್ರತಿಯೊಬ್ಬ ಮಾನ್ಯ ಸದಸ್ಯರೂ ನೋಟೀಸ್ ಆಫೀಸ್‌ಗೆ ಹೋಗಿ ನೋಡುವುದಕ್ಕೆ ಸಾಧ್ಯವಾಗುತ್ತದೆಯೆ ?

ಅಧ್ಯಕ್ಷರು.—ಇದು ನಾನು ಮಾಡಿದ ಶಾಸನವಲ್ಲ. ಹಿಂದಿನ ಸರ್ಕಾರ ಇದ್ದ ಕಾಲದಲ್ಲಿ ಈ ಸಭೆಯಲ್ಲೇ ಮಾಡಿದಂಥ ಶಾಸನ ಇದು.

ಒಬ್ಬ ಮಾನ್ಯ ಸದಸ್ಯರು.— ಸ್ವಾಮಿ, ಕೇವಲ ಅರ್ಧ ಗಂಟೆಯಲ್ಲಿ ಈ ಸದನದ ಶಿಖರ ಜನ ಸದಸ್ಯರೂ ನೋಟೀಸ್ ಬೋರ್ಡ್‌ನ ಹತ್ತಿರ ಹೋಗಿ ನೋಡುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಈ ಉತ್ತರಗಳನ್ನು ಪ್ರತಿಯೊಬ್ಬ ಸದಸ್ಯರಿಗೂ ಕಳಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ನಾನು ಈಗಾಗಲೇ ಹೇಳಿದಂತೆ ಇದು ನಾನು ಮಾಡಿದ ಶಾಸನವಲ್ಲ, ತಾವೇ ಮಾಡಿದ್ದು.

ಶ್ರೀ ಎಸ್. ಆರ್. ಬೊಮ್ಮಾಯಿ.—ಲೋಕಸಭೆಯಲ್ಲಿ ಇರತಕ್ಕ ಪದ್ಧತಿಯಂತೆ ಇಲ್ಲಿಯೂ ಕೂಡ ಮಾಡಲಾಗಿದೆ. ಲೋಕಸಭೆಯಲ್ಲಿ ಐದು ನೂರಕ್ಕೂ ಹೆಚ್ಚು ಸದಸ್ಯರು ಇರುತ್ತಾರೆ, ಅಲ್ಲಿಯೂ ಕೂಡ ಪ್ರಶ್ನೋತ್ತರ ವೇಳೆ ಇದೇರೀತಿ ಇರುತ್ತದೆ. ಈಗ ಪ್ರಾರಂಭದಲ್ಲಿ ಸ್ವಲ್ಪ ತೊಂದರೆಯಾಗಬಹುದು. ಸದಸ್ಯರು ಕೇಳುವ ಪ್ರಶ್ನೆಗಳಿಗೆ ಮಾನ್ಯ ಮಂತ್ರಿಗಳು ಉತ್ತರವನ್ನು ಕೊಡುತ್ತಾರೆ. ಈ ನಿಯಮಾವಳಿ ಬದಲಾವಣೆಯಾಗುವವರೆಗೂ ತಾವು ಈ ನಿಯಮಾವಳಿಯ ಚೌಕಟ್ಟಿನಲ್ಲಿಯೇ ಕೆಲಸ ಮಾಡಬೇಕಾಗುತ್ತದೆ. ಇದು ಬದಲಾವಣೆಯಾದ ನಂತರ ನಾವು ಇದರ ಸಾಧಕಬಾಧಕಗಳನ್ನು ಯೋಚನೆ ಮಾಡಿ ಸೂಕ್ತ ಪರಿಹಾರವನ್ನು ಒದಗಿಸಿಕೊಳ್ಳಬೇಕಾಗುತ್ತದೆ.

ಒಬ್ಬ ಮಾನ್ಯ ಸದಸ್ಯರು.—ಸ್ವಾಮಿ, ಕನ್ನಡದಲ್ಲಿ ಆಡಳಿತವನ್ನು ನಡೆಸಬೇಕೆಂದು ಸರ್ಕಾರದ ಆಜ್ಞೆ ಇದ್ದರೂ ಈ ಪ್ರಶ್ನೆಗಳನ್ನು ಇಂಗ್ಲಿಷ್‌ನಲ್ಲೇ ನಮಗೆ ಒದಗಿಸಿದ್ದೀರಿ ಇದು ಸರಿಯಲ್ಲ.

ಅಧ್ಯಕ್ಷರು.—ಕನ್ನಡದಲ್ಲೂ ಪ್ರಶ್ನೆಗಳ ಪಟ್ಟಿಯನ್ನು ಒದಗಿಸಿದೆ. ಬಹುಶಃ ತಮಗೆ ಬಂದಿಲ್ಲವೆಂದು ಕಾಣುತ್ತದೆ.

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಕೊಡಲಾದ ಬಾಯಿ ಮಾತಿನ ಉತ್ತರಗಳು

ಅಧ್ಯಕ್ಷರು.— ಮಾನ್ಯ ದೇವೇಂದ್ರಪ್ಪ ಘಾಳಪ್ಪನವರೇ ತಮ್ಮ ಪ್ರಶ್ನೆ(೧)ಯನ್ನು ಇಂದು ತಡೆ ಹಿಡಿದು ನಾಳೆ ತೆಗೆದುಕೊಳ್ಳುತ್ತೇವೆ.

ಕಚ್ಚಾ ರೇಷ್ಮೆಯಂ ಆಮದು

೨ ಶ್ರೀ ಜಿ. ಕೆ. ವೆಂಕಟಶಿವರೆಡ್ಡಿ (ಶ್ರೀನಿವಾಸಪುರ).—ಮಾನ್ಯ ಸಮಾಜ ಕಲ್ಯಾಣ ಹಾಗೂ ರೇಷ್ಮೆ ಸಚಿವರು ಈ ಕೆಳಗೆ ಕಂಡ ಪ್ರಶ್ನೆಗಳನ್ನು ಉತ್ತರಿಸುವರೇ ?

(ಅ) ಸರ್ಕಾರದವರು ಕಚ್ಚಾ ರೇಷ್ಮೆಯನ್ನು ಆಮದು ಮಾಡಿಕೊಳ್ಳುತ್ತಿರುವುದು ನಿಜವೇ ?

(ಆ) ಸ್ಥಳೀಯವಾಗಿ ಉತ್ಪಾದಿಸಿದ ಕಚ್ಚಾ ರೇಷ್ಮೆಯ ಬೆಲೆಯು ಇಳಿದಿರುವುದು ಸರ್ಕಾರದವರಿಗೆ ಗೊತ್ತಿದೆಯೆ ?

(ಇ) ಹಾಗಿದ್ದಲ್ಲಿ ಪ್ರೋತ್ಸಾಹಕರ ಬೆಲೆ ನೀಡಿ ರೈತರ ಹಿತದೃಷ್ಟಿಯನ್ನು ಕಾಪಾಡಲು ಸರ್ಕಾರದವರು ಕ್ರಮ ಕೈಕೊಳ್ಳುವರೆ ?